# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಲೋಕ್/BGM/2306/2022
ಮಂಡನಾಧಿಕಾರಿಗಳ ಶಾಖೆ: ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 07/06/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

ವಿಷಯ: **ಶ್ರೀ ಪ್ರಕಾಶ ಲದ್ದಿ, ಗ್ರಾಮ ಪಂಚಾಯತ್ ಸದಸ್ಯರು, ಹರ್ತಿ ಗ್ರಾಮ ಪಂಚಾಯತ್, ತಾಲೂಕು/ಜಿಲ್ಲೆ : ಗದಗ,** – ಆದ ಇವರು ಸಾರ್ವಜನಿಕ ಸೇವಕರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಗದಗ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಪ್ರಕಾಶ ಲದ್ದಿ, ಗ್ರಾಮ ಪಂಚಾಯತ್ ಸದಸ್ಯರು, ಹರ್ತಿ ಗ್ರಾಮ ಪಂಚಾಯತ್, ತಾಲ್ಲೂಕು/ಜಿಲ್ಲೆ : ಗದಗ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಮಹ್ಮದ್ ಆಸೀಫ್ ತಂದೆ: ಇಮಾಮ್ ಹುಸೇನ್ ಬೊದ್ಲೇಖಾನ, ವಾಸ: ಬನಶಂಕರಿ ಬಡಾವಣೆ, ಶರಣ ಬಸವೇಶ್ವರನಗರ, ಬೆಟಗೇರಿ, ಜಿಲ್ಲೆ: ಗದಗ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ** : ದೂರುದಾರರು ತನ್ನ ದೂರಿನಲ್ಲಿ, ತಾನು ಕೆಆರ್‌ಐಡಿಎಲ್ ಇಲಾಖೆಯ ಪರವಾಗಿ 24 ಲಕ್ಷ ರೂ ಮೊತ್ತದ, ಗದಗ ತಾಲ್ಲೂಕ, ಹರ್ತಿ ಗ್ರಾಮದ, ಬಸವೇಶ್ವರ ಗುಡಿ ಹತ್ತಿರ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು, ತಾನು ಕಳೆದ ವರ್ಷ ಕೈಗೊಂಡು ಪೂರ್ಣಗೊಳಿಸಿದ್ದು ಇರುತ್ತದೆ. ನಂತರ, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ, ಗ್ರಾಮ ಪಂಚಾಯತಿಯವರು ಕಾಮಗಾರಿಯನ್ನು ಹ್ಯಾಂಡ್ ಓವರ್ ಮಾಡಿಕೊಂಡು, ಎನ್‌ಓಸಿ ಕೊಟ್ಟ ನಂತರ, ಕಾಮಗಾರಿಯ ಬಿಲ್ ಮಂಜೂರಾಗುತ್ತದೆ. ಗ್ರಾಮ ಪಂಚಾಯತಿಯವರು ಹ್ಯಾಂಡ್ ಓವರ್ ಮಾಡಿಕೊಂಡು, ಎನ್‌ಓಸಿ

ಕೊಡಿಸುವ ಸಂಬಂಧ, ಹರ್ತಿ ಗ್ರಾಮ ಪಂಚಾಯತ ಸದಸ್ಯ ಪ್ರಕಾಶ ಲದ್ದಿ, ಇವರು 2ಲಕ್ಷ ರೂ ಲಂಚ ಕೊಡಲು ತನಗೆ ಒತ್ತಾಯಿಸಿ, ಪದೇ ಪದೇ ಫೋನ್ ಮಾಡುತ್ತಿದ್ದು, ದಿ: 20-03-2020 ರಂದು ಮುಂಜಾನೆ 10 ಗಂಟೆಯ ಸುಮಾರಿಗೆ ಎದುರುದಾರರ ಮೊಬೈಲ್ ನಂ: 9449511887ಗೆ ದೂರುದಾರರಾದ ಮೊಬೈಲ್ ನಂ: 9108303488ರಿಂದ ಕರೆ ಮಾಡಿ ಮಾತನಾಡಿ, ಸಾಧ್ಯವಾದಷ್ಟು ಹಣ ಹೊಂದಿಸಿಕೊಂಡು ತಂದು ಕೊಡುವುದಾಗಿ ಹೇಳಿ, ಗ್ರಾಮ ಪಂಚಾಯತಿಯಿಂದ ಹ್ಯಾಂಡ್ ಓವರ್ ತೆಗೆದುಕೊಂಡು ಪಿ.ಡಿ.ಓ ರವರಿಂದ ಎನ್.ಓ.ಸಿ. ಕೊಡಿಸುವಂತೆ ಹೇಳಿದ್ದು, ಎದುರುದಾರರು ನಾಳೆ ಪಿ.ಡಿ.ಓ ಜೊತೆ ಮಾತನಾಡುವುದಾಗಿ ಹೇಳಿ, ಮತ್ತೇ 2 ಲಕ್ಷ ರೂ. ತಂದು ಕೊಡಲು ಹೇಳಿದಾಗ, ಅದಕ್ಕೆ ದೂರುದಾರರು ಎಷ್ಟು ರೆಡಿ ಆಗುತ್ತದೋ ಅಷ್ಟು ರೆಡಿ ಮಾಡಿಕೊಂಡು ಒಂದೆರಡು ತಾಸಿನಲ್ಲಿ ಮುಟ್ಟಿಸುವುದಾಗಿ ಹೇಳಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಎದುರುದಾರರಿಗೆ ಹಣ ಕೊಡದಿದ್ದಲ್ಲಿ, ಗ್ರಾಮ ಪಂಚಾಯತಿಯವರು ಕಾಮಗಾರಿಯನ್ನು ಹ್ಯಾಂಡ್ ಓವರ್ ಮಾಡಿಕೊಂಡು ಎನ್.ಓ.ಸಿ ಕೊಡಲು ಅಡ್ಡಿಪಡಿಸಿರುತ್ತಾರೆ. ಇದರಿಂದಾಗಿ ಕೆಬಿಆರ್‌ಡಿಎಲ್ ದಿಂದ ಕಾಮಗಾರಿ ಬಿಲ್ ಆಗುವುದು ಲೇಟ್ ಆಗುತ್ತದೆ. ಬಿಲ್ ಆಗದಿದ್ದರೆ, ಹಣಕಾಸಿನ ತೊಂದರೆಯಾಗಿರುತ್ತದೆ. ಆದ್ದರಿಂದ ಈಗ ಐವತ್ತು ಸಾವಿರ ರೂಪಾಯಿಗಳನ್ನು ಹೊಂದಿಸಿಕೊಂಡು, ಎದುರುದಾರರಿಗೆ ಕೊಡಲು ತೆಗೆದುಕೊಂಡು ಬಂದಿರುವುದಾಗಿ ಹೇಳಿರುತ್ತಾರೆ. ಈ ಸಂಬಂಧವಾಗಿ ದೂರನ್ನು ದಿ: 20/03/2020ರಂದು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ, ಗದಗ ಜಿಲ್ಲೆ, ಇವರಿಗೆ ನೀಡಿದ್ದು, ಇದರ ಆಧಾರದ ಮೇರೆ ಸದರಿ ಮೊ.ಸಂಖ್ಯೆ: 05/2020 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7(ಎ) ರ ಅಡಿಯಲ್ಲಿ ಪ್ರಕರಣ ಪ್ರಕರಣ ದಾಖಲಿಸಿರುತ್ತಾರೆ.

3. ದಿನಾಂಕ: 20/03/2020ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಸಂತೋಷ್ ಪಂಚ-1, ಶ್ರೀ ಪ್ರಶಾಂತ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 50,000/- (ಹಣದ ಡಿನಾಮಿನೇಷನ್ 2000/- x 25) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ದಾಖಲಾಗಿದ್ದ ಮೊಬೈಲನ್ನು ಹಾಜರುಪಡಿಸಿರುತ್ತಾರೆ. ಪಂಚ-1 ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-2 ರವರು ನೋಟಿನ ವಿವರವನ್ನು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-2 ಶ್ರೀ ಪ್ರಶಾಂತ, ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 50,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರು ಧರಿಸಿದ್ದ ಶರ್ಟಿನ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ, ತನಿಖಾಧಿಕಾರಿಯವರು ದೂರುದಾರರಿಗೆ ನಿಗಧಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಕರ್ಚಿಪ್ ನಿಂದ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸೂಚನೆಯನ್ನು ನೀಡಬೇಕೆಂದು ಹಾಗೂ ಪಂಚ-1 ರವರು ದೂರುದಾರರ ಜೊತೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರನ್ನು ಭೇಟಿ ಮಾಡುವಾಗ, ತನ್ನ ಮೊಬೈಲ್ ವಾಯ್ಸ್ ರೆಕಾರ್ಡ್‌ನ್ನು ಉಪಯೋಗಿಸಿಕೊಳ್ಳುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ

ಪಂಚನಾಮೆಯನ್ನು ದಿನಾಂಕ: 20/03/2020 ರಂದು ಮುಂಜಾನೆ : 1145 ರಿಂದ ಸಾಯಂಕಾಲ: 13.15 ಗಂಟೆಯವರೆಗೆ ಮಾಡಿರುತ್ತಾರೆ.

4. ಅದೇ ದಿನ ಅಂದರೆ, ದಿನಾಂಕ: 20/03/2020 ರಂದು ತನಿಖಾಧಿಕಾರಿಯ ಸೂಚನೆಯ ಮೇರೆಗೆ ದೂರುದಾರರನ್ನು ಮತ್ತು ಪಂಚರನ್ನು ಮತ್ತು ಸಿಬ್ಬಂದಿಯನ್ನು ಕರೆದುಕೊಂಡು ದಾಳಿಗೆ ಹೊರಟಿರುತ್ತಾರೆ. ಆ ಸಮಯದಲ್ಲಿ ತನಿಖಾಧಿಯವರ ಸೂಚನೆ ಮೇರೆಗೆ ದೂರುದಾರರು ಎದುರುದಾರರ ಮೊಬೈಲ್ ನಂಬರಿಗೆ ಪೋನ್ ಮಾಡಿ ಎಲ್ಲಿ ಇರುತ್ತೀರಿ ಎಂದು ಕೇಳಿದಾಗ, ಎದುರುದಾರರು ಗದಗ ಭೂಮರೆಡ್ಡಿ ಸರ್ಕಲ್ ಹತ್ತಿರ ಇದ್ದು, ಮೌರ್ಯ ಹೋಟೆಲ್ ಕಡೆಗೆ ಬರುವುದಾಗಿ ತಿಳಿಸಿರುತ್ತಾರೆ. ಆಗ ಸಮಯ ಮದ್ಯಾಹ್ನ 1-28 ಗಂಟೆಯಾಗಿತ್ತು. ನಂತರ, ತನಿಖಾಧಿಕಾರಿಗಳು ದೂರುದಾರರಿಗೆ ಮತ್ತೊಮ್ಮೆ ಸೂಚನೆ ನೀಡಿ, ಹೋಟೆಲ್ ಎಂಟ್ರನ್ಸ್ ಹತ್ತಿರ ಎದುರುದಾರರು ಬರುವುದನ್ನು ಕಾಯುವಂತೆ ತಿಳಿಸಿ ಕಳುಹಿಸಿದರು, ಆಗ ಸಮಯ ಮಧ್ಯಾಹ್ನ: 1-40 ಗಂಟೆಯಾಗಿತ್ತು. ನಂತರ, ದೂರುದಾರರು ಹೋಟೆಲ್ ಅಂಡರ್ ಗ್ರೌಂಡ್‌ಗೆ ಹೋಗುವ ದಾರಿಯಲ್ಲಿ ನಿಂತಿದಾಗ, ಮಧ್ಯಾಹ್ನ: 1.50ರ ವೇಳೆಗೆ ಬೈಕ್ ಕೆಎ-26 ಡಬ್ಲ್ಯೂ ವಾಹನದಲ್ಲಿ ಇಬ್ಬರು ವ್ಯಕ್ತಿಗಳು ಬಂದು ದೂರುದಾರರನ್ನು ಭೇಟಿಯಾಗಿ 3 ಜನರು ಸೇರಿ, ಹೋಟೆಲ್‌ನ ಪ್ಯಾಮಿಲಿ ರೂಮ್‌ನ ಒಂದನೇ ಕಂಪಾರ್ಟಮೆಂಟ್‌ಗೆ ಹೋದರು. ನಂತರ, ದೂರುದಾರರು ಎದುರುದಾರರ ಜೊತೆ ಮಾತನಾಡಿ, ತನ್ನ ಬಳಿ ಇದ್ದ ಪಿನಾಪ್ತಲಿನ್ ಪೌಡರ್‌ನ ಲಂಚದ ಹಣವನ್ನು ತೆಗೆದು ನೆಹರು ಶರ್ಟ ಪೈಜಾಮ ಧರಿಸಿದ್ದ ವ್ಯಕ್ತಿಗೆ ಕೊಟ್ಟಾಗ ಅವರು ಆ ಹಣವನ್ನು ತಮ್ಮ ಬಲಗೈಯಿಂದ ಪಡೆದು, ಎರಡು ಕೈಯಲ್ಲಿ ಹಿಡಿದುಕೊಂಡು, ತಮ್ಮ ಪೈಜಾಮ ವಾಚ್ ಪಾಕೇಟನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ನೀಡಿರುತ್ತಾರೆ. ಸೂಚನೆಯನ್ನು ಅನುಸರಿಸಿ ತನಿಖಾಧಿಕಾರಿಯು ದೂರುದಾರರ ಬಳಿ ಬಂದಾಗ ದೂರುದಾರರು ತನ್ನಿಂದ ಲಂಚದ ಹಣವನ್ನು ಸ್ವೀಕರಿಸಿದ ವ್ಯಕ್ತಿಯನ್ನು ತೋರಿಸಿ, ಇವರೇ ಎದುರುದಾರರು ಶ್ರೀ ಪ್ರಕಾಶ್ ಲದ್ದಿ, ಹರ್ತಿ ಗ್ರಾಮ ಪಂಚಾಯತಿ ಸದಸ್ಯರು, ಅವರ ಜೊತೆ ಇದ್ದ ಜಡಿಯಪ್ಪ ಲದ್ದಿ ಎಂದು ತೋರಿಸಿ, ಎದುರುದಾರರು ತನ್ನಿಂದ ಪಡೆದುಕೊಂಡ ಲಂಚದ ಹಣವನ್ನು ಪೈಜಾಮ ವಾಚ್ ಪಾಕೇಟದಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ಹೇಳಿದರು. ನಂತರ ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿದ್ದು, ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಸಿಬ್ಬಂದಿಯು ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಪಂಚ-1 ರವರು ಎದುರುದಾರರಿಂದ ಲಂಚದ ಹಣವನ್ನು ಪಡೆದು ಅವುಗಳ ನಂಬರು ಮತ್ತು ಮೌಲ್ಯವನ್ನು ಪರಿಶೀಲಿಸಿದಾಗ, ಅವು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆಯಾಗಿರುತ್ತದೆ ನಂತರ ಸದರಿ ಹಣವನ್ನು ತನಿಖಾಧಿಕಾರಿಯು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಸಿಬ್ಬಂದಿಯು ಎದುರುದಾರರು ಲಂಚದ ಹಣ ಇಟ್ಟಿದ್ದ ಪೈಜಾಮಿನ ಮುಂದಿನ ಬಲಭಾಗದ ವಾಚ್ ಪಾಕೇಟಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಭಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ,

ತನಿಖಾಧಿಕಾರಿಯವರು ಪೈಜಾಮ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಕುರಿತು ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ವಿವರಣೆ ನೀಡುವಂತೆ ಕೇಳಿದಾಗ, ಎದುರುದಾರರು ತನ್ನ ವಿವರಣೆಯನ್ನು ತನ್ನ ಜೊತೆಯಲ್ಲಿದ್ದ ಸಂಬಂಧಿ ಜಡಿಯಪ್ಪ ಲದ್ದಿ ಇವರು ಬರೆದುಕೊಟ್ಟಿರುತ್ತಾರೆ. **"ನಮ್ಮ ಊರಲ್ಲಿ ಬಸವಣ್ಣ ಗುಡಿಯ ಹತ್ತಿರ ತಡೆ ಗೋಡೆಯ ಕೆಲಸವನ್ನು ಕಾಂಟ್ರಾಕ್ಟರ್ ಬೊದ್ಲೇಖಾನ ರವರು ಮಾಡಿ ಮುಗಿಸಿದ್ದು ಈ ಕೆಲಸಕ್ಕೆ ನಮ್ಮ ಊರಿನವರ ಕಡೆ ಇಂದ ಉಸುಕು, ನೀರು ಕಲ್ಲು, ಸಿಮೆಂಟ್ ಮತ್ತಿತ್ತರ ಸಾಮಗ್ರಿಗಳನ್ನು ಪೂರೈಸುತ್ತಿದ್ದು ಇದಕ್ಕಾಗಿ ಕಾಂಟ್ರ್ಯಾಕ್ಟರ್ ಕಡೆ ಇಂದ 200000/- ರೂಪಾಯಿಗಳನ್ನು ಕೇಳಿದ್ದು, ಇಂದು 50000/- ರೂಗಳನ್ನು ಕೊಡುವಾಗ ಗದಗಿನ ಮೌರ್ಯ ಹೋಟೆಲ್‌ನಲ್ಲಿ ದಾಳಿ ಮಾಡಿದ್ದು ಇರುತ್ತದೆ ಎಂದು ಹೇಳಿರುತ್ತಾರೆ".** ಸದರಿ ವಿವರಣೆ ಕುರಿತು ತನಿಖಾಧಿಕಾರಿಯು ದೂರುದಾರರನ್ನು ಕೇಳಿದಾಗ ದೂರುದಾರರು ಸಾಮಗ್ರಿ ಪೂರೈಕೆ ದಾರರಿಗೆ ಬಿಲ್ ಪಾವತಿಸುವುದು ಪ್ರಕಾಶ್ ಲದ್ದಿ ರವರಿಗೆ ಸಂಬಂಧವಿರುವುದಿಲ್ಲ ಎಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ವಹಿಸುವಿಕೆ ಹಾಗೂ ಟ್ರ್ಯಾಪ್ ಪಂಚನಾಮೆಗೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ ಮತ್ತು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ದಿನಾಂಕ: 20/03/2020 ರಂದು ತನಿಖಾಧಿಕಾರಿಯು ಟ್ರ್ಯಾಪ್ ಪಂಚನಾಮೆಯನ್ನು ಮಧ್ಯಾಹ್ನ: 1-55 ರಿಂದ ಸಾಯಂಕಾಲ: 4.30 ರವರೆಗೆ ಬರೆದಿರುತ್ತಾರೆ.

5. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವ ಸಂಬಂಧ ವರದಿ ಕೋರಿ, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ಕಳುಹಿಸಿರುತ್ತಾರೆ.

6. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಯವರು ಎದುರುದಾರರಿಂದ ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

7. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

8. ಗೌರವಾನ್ವಿತರ ಆದೇಶದ ಅನ್ವಯ, ದಿನಾಂಕ: 30/09/2022ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 30/01/2023 ರಂದು ಕೆಲವು ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ದೂರಿನಲ್ಲಿರುವ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ದೂರುದಾರರ ಮತ್ತು ತನ್ನ ನಡುವೆ ಹಣಕಾಸಿನ ವ್ಯವಹಾರವಿದ್ದು, ದೂರುದಾರರು ತನ್ನ ಬಳಿ ಕೈ ಸಾಲ ಪಡೆದು ವ್ಯವಹಾರ ಮಾಡುತ್ತಿದ್ದು, ದೂರುದಾರರಿಂದ ತನಗೆ ಹಣ ಬರುವುದು ಬಾಕಿ ಇರುತ್ತದೆ. ಹಣವನ್ನು ವಾಪಸ್ಸು ಕೇಳಿದಾಗ, ದೂರುದಾರರು ತನ್ನ ವಾಹನದ ದಾಖಲಾತಿ, 02 ಚೆಕ್ ಮತ್ತು 02 ಬಾಂಡನ್ನು ನೀಡಿರುತ್ತಾರೆ. ಸದರಿ ದಾಖಲಾತಿಗಳ ಮೇಲೆ ದೂರುದಾರರು ತನ್ನಿಂದ ಹಣವನ್ನು ಪಡೆದಿದ್ದು, ಸದರಿ ಹಣವನ್ನು ತಾನು ಕೇಳಿರುತ್ತೇನೆ ಎಂದು ಹೇಳಿರುತ್ತಾರೆ. ದೂರುದಾರರು ದೂರಿನಲ್ಲಿ

ಹೇಳಿರುವ ಕಾಮಗಾರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ, ಇದು ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು ಇರುತ್ತದೆ ಹಾಗೂ ಸದರಿ ಕಾಮಗಾರಿಯನ್ನು ಭೂಸೇನಾ ಅಭಿಯಂತರರು ಮಾಡಿರುತ್ತಾರೆ. ಆ ಸಂಬಂಧವಾಗಿ ತಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳಿರುತ್ತಾರೆ. ಆದ್ದರಿಂದ, ದೂರುದಾರರು ತನ್ನ ವಿರುದ್ಧ ಸುಳ್ಳು ದೂರನ್ನು ರಾಜಕೀಯ ಪ್ರಭಾವ ಬಳಸಿ ನೀಡಿರುತ್ತಾರೆ. ತಾನು ಕರ್ತವ್ಯದ ಅವಧಿಯಲ್ಲಿ ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಹಾಗೂ ತಾನು ನಿರಪರಾದಿಯಾಗಿರುತ್ತೇನೆ ಇತ್ಯಾದಿ ಎಂದು ತಿಳಿಸಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗಾಗಿ ಇವರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ಎದುರುದಾರರು ದುರ್ನಡತೆ ಎಸಗಿರುವುದು ಕಂಡು ಬರುತ್ತದೆ.

9. ಮೇಲ್ಕಂಡ ದಾಖಲೆಗಳು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ, ಎದುರುದಾರರು ಸಾರ್ವಜನಿಕ ಸೇವಕರಾಗಿ ಕರ್ತವ್ಯದಲ್ಲಿ ದುರ್ನಡತೆ ತೋರಿಸಿ, ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರ ಎಸಗಿರುವುದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 43(ಎ)(1)(i) ರನ್ವಯ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/6/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ)
ಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು